# ಒಕ್ಕೂಟ ಉತ್ಪಾದನಾ ಸುಂಕಗಳ (ವಿದ್ಯುಚ್ಛಕ್ತಿ) ವಿತರಣಾ ಅಧಿನಿಯಮ, 1980

(1980ರ ಅಧಿನಿಯಮ ಸಂಖ್ಯೆ 14)

**[04-03-2002ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 22ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 8 ಮತ್ತು 9ನೇ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆ
3. ವಿದ್ಯುಚ್ಛಕ್ತಿಯ ಮೇಲಿನ ಒಕ್ಕೂಟ ಉತ್ಪಾದನಾ ಸುಂಕಗಳ ನಿವ್ವಳ ಉತ್ಪತ್ತಿಗಳಿಗೆ ಸಮನಾದ ಮೊತ್ತಗಳನ್ನು ರಾಜ್ಯಗಳಿಗೆ ಸಂದಾಯ ಮಾಡುವುದು ಮತ್ತು ಆ ಮೊತ್ತಗಳನ್ನು ರಾಜ್ಯಗಳೊಳಗೆ ವಿತರಣೆ ಮಾಡುವುದು
4. ಸಂದಾಯವನ್ನು ಭಾರತದ ಸಂಚಿತ ನಿಧಿಗೆ ಖರ್ಚು ಹಾಕುವುದು
5. ನಿಯಮ ರಚನಾಧಿಕಾರ.

# ಒಕ್ಕೂಟ ಉತ್ಪಾದನಾ ಸುಂಕಗಳ (ವಿದ್ಯುಚ್ಛಕ್ತಿ) ವಿತರಣಾ ಅಧಿನಿಯಮ, 1980

(1980ರ ಅಧಿನಿಯಮ ಸಂಖ್ಯೆ 14)

[25ನೇ ಮಾರ್ಚ್ 1980]

ಹಣಕಾಸು ಆಯೋಗದ 1983ರ ನವೆಂಬರ್ 14ನೇ ಮಧ್ಯಕಾಲೀನ ವರದಿಯಲ್ಲಿನ ಶಿಫಾರಸುಗಳಿಗನುಸಾರವಾಗಿ, ವಿದ್ಯುಚ್ಛಕ್ತಿಯ ಮೇಲಣ ಒಕ್ಕೂಟ ಉತ್ಪಾದನಾ ಸುಂಕಗಳ ನಿವ್ವಳ ಉತ್ಪತ್ತಿಗಳಿಗೆ ಸಮಾನವಾದ ಮೊತ್ತಗಳನ್ನು ಭಾರತದ ಸಂಚಿತ ನಿಧಿಯಿಂದ ಆ ಸುಂಕವನ್ನು ವಿಧಿಸುವ ಕಾನೂನು ಅನ್ವಯವಾಗುವ ರಾಜ್ಯಗಳಿಗೆ ಸಂದಾಯ ಮಾಡುವುದಕ್ಕಾಗಿ ಮತ್ತು ಆ ರಾಜ್ಯಗಳೊಳಗೆ ಆ ಮೊತ್ತಗಳನ್ನು ವಿತರಣೆ ಮಾಡುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಒಕ್ಕೂಟ ಉತ್ಪಾದನಾ ಸುಂಕಗಳ (ವಿದ್ಯುಚ್ಛಕ್ತಿ) ವಿತರಣಾ ಅಧಿನಿಯಮ, 1980 ಎಂದು ಕರೆಯತಕ್ಕುದು.

(2) ಇದು 1ನೇ ಏಪ್ರಿಲ್ 1979ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದು.

**2. ಪರಿಭಾಷೆ.-** ಈ ಅಧಿನಿಯಮದಲ್ಲಿ "ವಿದ್ಯುಚ್ಛಕ್ತಿಯ ಮೇಲಣ ವಿತರಣೀಯ ಒಕ್ಕೂಟ ಉತ್ಪಾದನಾ ಸುಂಕಗಳು " ಎಂದರೆ ಕೇಂದ್ರ ಉತ್ಪಾದನಾ ಸುಂಕಗಳು ಮತ್ತು ಉಪ್ಪು ಅಧಿನಿಯಮ, 1944 (1944ರ 1)ರ ಮೇರೆಗೆ ಮತ್ತು ಅಂತಹ ಸುಂಕದ ವಿಧಿಸುವಿಕೆ ಮತ್ತು ವಸೂಲು ಮಾಡುವಿಕೆಗಾಗಿನ ಯಾವುದೇ ಕಾನೂನು ಯಾವುದೇ ವಿಶೇಷ ಉದ್ದೇಶಕ್ಕಾಗಿ ಆ ಸುಂಕದ ಉತ್ಪತ್ತಿಯನ್ನು ಮೀಸಲಿರಿಸಿದ ಹೊರತು ಆ ಇತರ ಕಾನೂನಿನ ಮೇರೆಗೆ ಒಕ್ಕೂಟ ರಾಜ್ಯ ಕ್ಷೇತ್ರಗಳಲ್ಲಿನ ಹೊರತಾಗಿ, ವಿದ್ಯುಚ್ಛಕ್ತಿಯ ಮೇಲೆ ವಿಧಿಸಲಾದ ಮತ್ತು ವಸೂಲು ಮಾಡಿದ ಸಂಘದ ಉತ್ಪಾದನಾ ಸುಂಕಗಳ ನಿವ್ವಳ ಉತ್ಪತ್ತಿ.

**ವಿವರಣೆ:-** "ನಿವ್ವಳ ಉತ್ಪತ್ತಿ" ಎಂಬ ಪದಾವಳಿಯು ಸಂವಿಧಾನದ 279ನೇ ಅನುಚ್ಛೇದದ (1)ನೇ ಖಂಡದಲ್ಲಿರುವಂತಹ ಅರ್ಥವನ್ನೇ ಹೊಂದಿರುತ್ತದೆ.

**3. ವಿದ್ಯುಚ್ಛಕ್ತಿಯ ಮೇಲಿನ ಒಕ್ಕೂಟ ಉತ್ಪಾದನಾ ಸುಂಕಗಳ ನಿವ್ವಳ ಉತ್ಪತ್ತಿಗಳಿಗೆ ಸಮನಾದ ಮೊತ್ತಗಳನ್ನು ರಾಜ್ಯಗಳಿಗೆ ಸಂದಾಯ ಮಾಡುವುದು ಮತ್ತು ಆ ಮೊತ್ತಗಳನ್ನು ರಾಜ್ಯಗಳೊಳಗೆ ವಿತರಣೆ ಮಾಡುವುದು-** 1984ರ ಏಪ್ರಿಲ್ 1ನೇ ದಿನದಂದು ಆರಂಭವಾಗುವ ಹಣಕಾಸು ವರ್ಷದಲ್ಲಿ, ವಿದ್ಯುಚ್ಛಕ್ತಿಯ ಮೇಲೆ ವಿಧಿಸಲಾದ ಮತ್ತು ಆ ವರ್ಷದಲ್ಲಿ ವಸೂಲು ಮಾಡಲಾದ ವಿತರಣೀಯ ಒಕ್ಕೂಟ ಉತ್ಪಾದನಾ ಸುಂಕಗಳಿಗೆ ಸಮಾನವಾದ ಮೊತ್ತಗಳನ್ನು ಭಾರತದ ಸಂಚಿತ ನಿಧಿಯಿಂದ ರಾಜ್ಯಗಳಿಗೆ ಸಂದಾಯ ಮಾಡತಕ್ಕುದು ಮತ್ತು ಆ ಮೊತ್ತಗಳನ್ನು ಈ ಕೆಳಗಿನ ಕೋಷ್ಟಕದ (1)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಪ್ರತಿಯೊಂದು ರಾಜ್ಯಕ್ಕೆ, (2)ನೇ ಅಂಕಣದಲ್ಲಿ ಅದರ ಎದುರಿಗೆ ನಿರೂಪಿಸಿರುವಂಥ ಶೇಕಡಾವಾರು ಪ್ರಮಾಣದಲ್ಲಿ ತಾತ್ಕಾಲಿಕವಾಗಿ ವಿತರಣೆ ಮಾಡತಕ್ಕುದು.

**ಕೋಷ್ಟಕ**

| ರಾಜ್ಯ | ಶೇಕಡಾವಾರು |
|---|---|
| (1) | (2) |
| ಆಂಧ್ರಪ್ರದೇಶ | 8.51 |
| ಅಸ್ಸಾಂ | 1.09 |
| ಬಿಹಾರ | 5.74 |
| ಗುಜರಾತ್ | 9.66 |
| ಹರಿಯಾಣ | 2.49 |
| ಹಿಮಾಚಲ ಪ್ರದೇಶ | 0.55 |
| ಜಮ್ಮು ಮತ್ತು ಕಾಶ್ಮೀರ | 1.15 |
| ಕರ್ನಾಟಕ | 7.05 |
| ಕೇರಳ | 4.22 |
| ಮಧ್ಯಪ್ರದೇಶ | 7.09 |
| ಮಹಾರಾಷ್ಟ್ರ | 19.38 |
| ಮಣಿಪುರ | 0.04 |
| ಮೇಘಾಲಯ | 0.11 |
| ನಾಗಾಲ್ಯಾಂಡ್ | 0.04 |
| ಒರಿಸ್ಸ | 3.02 |
| ಪಂಜಾಬ್ | 3.54 |
| ರಾಜಾಸ್ತಾನ್ | 2.92 |
| ಸಿಕ್ಕಿಂ | 0.01 |
| ತಮಿಳುನಾಡು | 7.71 |
| ತ್ರಿಪುರ | 0.08 |
| ಉತ್ತರ ಪ್ರದೇಶ | 8.17 |
| ಪಶ್ಚಿಮ ಬಂಗಾಳ | 7.43 |

**4. ಸಂದಾಯವನ್ನು ಭಾರತದ ಸಂಚಿತ ನಿಧಿಗೆ ಖರ್ಚು ಹಾಕುವುದು.–** 3ನೇ ಪ್ರಕರಣದ ಅನುಸಾರವಾಗಿ ಮಾಡಲಾಗುವ ಸಂದಾಯಗಳ ಬಗೆಗಿನ ವೆಚ್ಚವನ್ನು ಭಾರತದ ಸಂಚಿತ ನಿಧಿಗೆ ಖರ್ಚು ಹಾಕತಕ್ಕುದು.

**5. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ಮಾಡಬೇಕಾಗಿರುವ ಯಾವುವೇ ಸಂದಾಯಗಳನ್ನು ಯಾವ ಸಮಯದಲ್ಲಿ ಮತ್ತು ಯಾವ ರೀತಿಯಲ್ಲಿ ಮಾಡಬೇಕು ಎಂಬ ಬಗ್ಗೆ, ಒಂದು ಹಣಕಾಸು ವರ್ಷ ಮತ್ತು ಇನ್ನೊಂದು ಹಣಕಾಸು ವರ್ಷದ ನಡುವೆ ಹೊಂದಾಣಿಕೆಗಳನ್ನು ಮಾಡುವ ಬಗ್ಗೆ ಮತ್ತು ಯಾವುದೇ ಇತರ ಪ್ರಾಸಂಗಿಕ ಅಥವಾ ಅನುಗತ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸುವ ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕುದು, ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

* * * *